# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 268
ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 15-02-2024
ಉತ್ತರಿಸುವವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ ಸಂ. | ಪ್ರಶ್ನೆ | ಉತ್ತರ |
| --- | --- | --- |
| ಅ | ಸಹಕಾರ ನಗರ ವಾರ್ಡ್ ಸಂಖ್ಯೆ 08 ರಲ್ಲಿ ಪಾರ್ಕ್‌ಗಳು ರಸ್ತೆಗಳಲ್ಲಿ ಕಸ ಮತ್ತು ತ್ಯಾಜ್ಯಗಳು ಸರಿಯಾಗಿ ವಿಲೇವಾರಿಯಾಗಿದೆ ಇರುವುದನ್ನು ಸರ್ಕಾರವು ಪರಿಗಣಿಸಿ ಸ್ವಚ್ಛತೆ ಕಾರ್ಯದ ಹೊಣೆಗಾರಿಕೆಯನ್ನು ಯಾರಿಗೆ ನಿಗದಿಪಡಿಸಿರುತ್ತದೆ; | ಪಾಲಿಕೆಯ ವಾರ್ಡ್ ಸಂಖ್ಯೆ: 08 ರ ಪಾರ್ಕ್‌ಗಳನ್ನು ಯಲಹಂಕ ವಲಯದ ತೋಟಗಾರಿಕೆ ವಿಭಾಗದಿಂದ ನಿರ್ವಹಿಸಲಾಗುತ್ತಿದೆ. ಪಾಲಿಕೆಯ ಯಲಹಂಕ ವಲಯದ ಬ್ಯಾಟರಾಯನಪುರ ವಿಭಾಗ ಘನತ್ಯಾಜ್ಯ ನಿರ್ವಹಣೆ, ಕಸ ಸಂಗ್ರಹಣೆ ಮತ್ತು ವಿಲೇವಾರಿ ಕೆಲಸವನ್ನು ಪಾಲಿಕೆಯು ನಿರ್ವಹಿಸುತ್ತಿದ್ದು, ಪ್ರತಿ ದಿನ ಮನೆ ಮನೆಯಿಂದ ವಿಂಗಡಿತ ಹಸಿ ತ್ಯಾಜ್ಯವನ್ನು ಸಂಗ್ರಹಿಸಿ ಕನ್ನಳ್ಳಿ ಸಂಸ್ಕರಣಾ ಘಟಕಕ್ಕೆ ಹಾಗೂ ಒಣ ತ್ಯಾಜ್ಯವನ್ನು ಒಣತ್ಯಾಜ್ಯ ಸಂಗ್ರಹಣಾ ಘಟಕಕ್ಕೆ ಮಿಶ್ರ ತ್ಯಾಜ್ಯವನ್ನು ಬೆಳ್ಳಳ್ಳಿ ಘಟಕಕ್ಕೆ ಸಾಗಿಸಲಾಗುತ್ತಿದೆ. |
| ಆ | ಈ ವಾರ್ಡ್‌ನಲ್ಲಿ ಸ್ವಚ್ಛತೆಗಾಗಿ ಗುತ್ತಿಗೆ ಪಡೆದಿರುವ ಗುತ್ತಿಗೆದಾರರ ವಿವರ ಒದಗಿಸುವುದು; ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರ ಸಂಖ್ಯೆಯು ಕಡಿಮೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗುತ್ತಿಗೆದಾರರ ಹೆಸರು:- ಕೆ.ಪ್ರಭಾಕರ್,<br>ವಾರ್ಡ್ ಸಂಖ್ಯೆ:08ರಲ್ಲಿ ಪ್ರಸ್ತುತ 67 ಜನ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಿರುತ್ತಾರೆ. |
| ಇ | ನಿಯಮದ ಅನ್ವಯ ಇಲ್ಲಿ ಯಾವ ಯಾವ ವಿಭಾಗದಲ್ಲಿ ಎಷ್ಟು ಸಂಖ್ಯೆಯ ಪೌರ ಕಾರ್ಮಿಕರು ಕಾರ್ಯನಿರ್ವಹಿಸಬೇಕಾಗುತ್ತದೆ? (ವಿವರ ನೀಡುವುದು) | ಯಲಹಂಕ ವಲಯದಲ್ಲಿ ಎರಡು ವಿಭಾಗಗಳಿದ್ದು, ಪ್ರಸ್ತುತ ಯಲಹಂಕ ವಿಭಾಗದಲ್ಲಿ 381 ಮತ್ತು ಬ್ಯಾಟರಾಯನಪುರ ವಿಭಾಗದಲ್ಲಿ 648 ಪೌರ ಕಾರ್ಮಿಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ. |

...2..

| | | |
|---|---|---|
| ಈ | ಈ ವಾರ್ಡ್‌ನಲ್ಲಿ ಆಟದ ಮೈದಾನಗಳನ್ನು ಪದೇ ಪದೇ ಇತರ ಉದ್ದೇಶಗಳಿಗೆ ತಿಂಗಳುಗಟ್ಟಲೆ ಬಾಡಿಗೆ ನೀಡುತ್ತಿದ್ದು, ಮಕ್ಕಳು ಆಟದ ಮೈದಾನವಿಲ್ಲದೆ ವಂಚಿತರಾಗುತ್ತಿದ್ದು ಹಿಂದಿನ ದಿನಗಳಲ್ಲಿ ಆಟದ ಮೈದಾನಗಳನ್ನು ಅನ್ಯ ಉದ್ದೇಶಗಳಿಗೆ ಬಳಕೆ ಮಾಡದಂತೆ ಸರ್ಕಾರವು ಆದೇಶ ಹೊರಡಿಸುವುದೇ; ಆಟದ ಮೈದಾನಗಳನ್ನು ಅನ್ಯ ಉದ್ದೇಶಕ್ಕೆ ಬಳಕೆ ಮಾಡಲು ಅನುಮತಿ ನೀಡುವ ಅಧಿಕಾರಿಗಳ ಮೇಲೆ ಮುಂದಿನ ದಿನಗಳಲ್ಲಿ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು; | ಬೆಂಗಳೂರು ನಗರ ವಾರ್ಡ್ ನಂ.8ರ ಸಹಕಾರನಗರದಲ್ಲಿರುವ ಮಕ್ಕಳ ಆಟದ ಮೈದಾನಗಳನ್ನು 2022ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು 25 ದಿನಗಳಂದು ವಿವಿಧ ಕಾರ್ಯಕ್ರಮಗಳಿಗೆ ಬಾಡಿಗೆಗೆ ನೀಡಲಾಗಿರುತ್ತದೆ. ಬಾಡಿಗೆಗೆ ನೀಡಲು ಆಯುಕ್ತರು ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಆ/ಪಿಆರ್/5555/15–16ದಿನಾಂಕ:12.08.2015ರಂತೆ ಕ್ರಮವಹಿಸಲಾಗುತ್ತಿದೆ. ಸದರಿ ಪ್ರದೇಶದಲ್ಲಿನ ಸುತ್ತಮುತ್ತಲಿನ ಶಾಲೆಗಳಲ್ಲಿ ಮೈದಾನಗಳು ಇಲ್ಲದೆ ಇರುವುದರಿಂದ ಖಾಸಗಿ ಶಾಲೆಯವರು ಸ್ವಇಚ್ಛೆಯಿಂದ ಆಟದ ಮೈದಾನವನ್ನು ಬಳಸುತ್ತಿದ್ದಾರೆ ಮತ್ತು ಅಕ್ಕ–ಪಕ್ಕ ಎರಡು ಆಟದ ಮೈದಾನಗಳಿರುವುದರಿಂದ ಮಕ್ಕಳಿಗೆ ಆಟವಾಡಲು ಯಾವುದೇ ತೊಂದರೆ ಆಗದಂತೆ ಕ್ರಮವಹಿಸಲಾಗಿರುತ್ತದೆ. ಇದುವರೆವಿಗೂ ಮಕ್ಕಳಿಗೆ ಆಟವಾಡಲು ತೊಂದರೆಯಾಗುತ್ತಿರುವ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ. |

**ಸಂಖ್ಯೆ: ನಅಇ 18 ಬಿಬಿಎಲ್ 2024**

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ